ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟಿಲ್‌ಮೆಂಟ್ ಇಲಾಖೆ.

ಇಸ್ತಿಹಾರ್‌ನಾಮೆ.

ನಂಬರ್ 152. ತಾರೀಖು 17ನೇ ಏಪ್ರೆಲ್ ಸ್ಯ 1890ನೇ ಇಸವಿ.

ಸಕಲ ಜನಗಳಿಗೂ ತಿಳಿಯುವದಕೋಸ್ಕರ ಇದರಿಂದ ಪ್ರಕಟಿಸಲ್ಪಡುವದೇನಂದರೆ,— ಕೋಲಾರ ಡಿಸ್ಟ್ರಿಕ್ಟಿಗೆ ಶೇರಿದ ಮಾಲೂರು ತಾಲ್ಲೂಕಿನ ರೆವಿನ್ಯೂ ಸರ್ವೆಸೆಟಿಲ್‌ಮೆಂಟ್ ಯಾನೆ ತರಮ ಜಮಾಬಂದಿ ಕೆಲಸವು ಸ್ಯ 1890ನೇ ಇಸವಿ ಮೇ 5ನೇ ತಾರೀಖಿನಲ್ಲಿ ಯಾ ಆ ಸುಮಾರಿಗೆ ಪ್ರಾರಂಭಿಲ್ಪಡುತ್ತೆ.

ಜೆ. ರತರ್‌ಫರ್ಡ್, ಕರ್ನಲ್
ಡೆಪ್ಯುಟಿ ಸೂಪರ್‌ಟೆಂಡೆಂಡ್ ರೆವಿನ್ಯೂ ಸರ್ವೆ.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್‌ನಾಮೆ.

ತಾರೀಖು 22ನೇ ಏಪ್ರೆಲ್ 1890ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,— ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿ ಆದ ಇದರಡಿ ನಮೂದಿಸಿರುವ ಚೌಬೀನೆ ವಗೈರೆ ಸಾಮಾನು ಆಯಾ ಬಾಜುದಲ್ಲಿ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್‌ಪಡುತ್ತೆ.

ಹರಾಜು ಮಾಡಲ್ಪಡುವ ಸ್ಥಳದ ಹೆಸರು.	ಹರಾಜು ತಾರೀಖು.	ತ್ಯಾಗದ ದೂಲಗಳು.	ಜಂಗಲಿ ದೂಲಗಳು.	ತ್ಯಾಗ ಮತ್ತು ಜಂಗಲಿ ಕಂಬುಗಳು.	ಜೊಂಬುಗಳು	ತ್ಯಾಗದ ಕಾಪಿಸಿಂಗ್ಸ್ ವ ಕೊಂಬೆ ಮರಗಳು.	ಷರಾ.
ಹೊನ್ನೇಗುಡ್ಡ ..	1890ನೇ ಇಸವಿ ಮೇ 10	..	..	..	...	328	ಮೊಬಲಗು ಪಾವತಿಮಾಡಿದ ತಾರೀಖು ಲಾಗಾಯತು ಸಾಮಾನಿನ ಉಸ್ತುವಾರಿ ಬಂದೋಬಸ್ತು ಕ್ಕೆ ತೆಗದುಕೊಂಡವರಿಗೆ ಕೇರಿಯಿರುತ್ತೆ.
ಚಂಪದಹಳ್ಳಿ ..	ಡಿಟೋ 12	..	..	..	..	1185	
ಬೀಕನಹಳ್ಳಿ ..	ಡಿಟೋ 22	..	..	..	..	1698	
ತರೀಕೆರೆ ಡಿಪೋ ..	ಡಿಟೋ ಡಿಟೋ 5	..	70	250 ತ್ಯಾಗ	20,000	..	ಹೆಚ್ಚು ಕಡಮೆಯಾಗಿ
ಹೆಬ್ಬೇ ಡಿಪೋ ..	ಡಿಟೋ 10	150	100	..	..	..	
ಲಕ್ಕವಳ್ಳಿ ಡಿಪೋ ..	ಡಿಟೋ 16	600	200	150 ತ್ಯಾಗ 200 ಜಂಗಲಿ	..	..	

ಹರಾಜಿನ ಷರತ್ತುಗಳು—(1) ಡಿಪೋಗಳಲ್ಲಿ ಮಾರಲ್ಪಡುವ ಬೆಲಗು ಮತ್ತು ದೂಲಗಳ ವಿಷಯದಲ್ಲಿ 1887ನೇ ಇಸವಿ ಆಗಸ್ಟ್ 30ನೇ ತಾರೀಖಿನ 99ನೇ ನಂ. ನೋಟಿಫಿಕೇಷ್ನ ನೋಡತಕ್ಕದ್ದು.

(2) ಕಾಡಿನಲ್ಲಿ ಇರುವ ತ್ಯಾಗದ ಕಾಪಿಸಿಂಗ್ಸ್‌ಯಾನೆ ಕೊಂಬೆ ಮರಗಳ ವಿಷಯದಲ್ಲಿ ಹರಾಜಿನ ಪೂರಾ ಮೊಬಲಗನ್ನು ಮೂರು ದಿವಸಗಳಲ್ಲಿಯೇ ಪಾವತಿ ಮಾಡತಕ್ಕದ್ದು, ತಪ್ಪಿದಲ್ಲಿ ಸದರಿ ಸಾಮಾನನ್ನು ಪುನಹ ಹರಾಜು ಮಾಡಲ್ಪಡುತ್ತೆ. ಇದರಿಂದ ಸಂಭವಿಸುವ ನಷ್ಟಕ್ಕೆ ಮೊದಲ್ ಹರಾಜಿನಲ್ಲಿ ತೆಗದುಕೊಂಡವನು ಬದ್ಧನಾಗಿರುತ್ತಾನೆ. ಹರಾಜಿನಲ್ಲಿ ಪಡದ ಪೂರಾ ಸಾಮಾನುಗಳನ್ನು ಹರಾಜು ತಾರೀಖು ಲಾಗಾಯತು 10 ದಿವಸಗಳಲ್ಲಿ ಸಾಗಿಸಿಕೊಂಡು ಹೋಗತಕ್ಕದ್ದು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಕೋಲಾರ ಡಿಸ್ಟ್ರಿಕ್ಟು.

ನೋಟಿಸ್.

1890ನೇ ಇಸವಿ 22ನೇ ಮಾರ್ಚಿ.

ಭಂಗಾರದ ಗಣಿಗೆಳಿಗೆ ಸಾದೆ ಸರಬರಾಯಿ.

ಬವರಿಂಗ್‌ಪೇಟೆ ಮತ್ತು ಮಾಲೂರು ತಾಲ್ಲೂಕುಗಳಲ್ಲಿರುವ ಕಾವುಸಂದ್ರ ಜಂಗಲಿನ ನಂ. IIನೇ ಬ್ಲಾಕಿನಲ್ಲಿಯೂ ಮತ್ತು ನಂಬರ್ Iನೇ ಬ್ಲಾಕಿನಲ್ಲಿ ಕತರಾವಣೆ ಆಗದೆ ಯಿರುವ ಭಾಗದಲ್ಲಿಯೂ ಸಹ ಬಂದು ವರುಷದ ಪರಿಯಂತ್ರವಾಗಿ ಸಾದೆ ಕತರಾಯಿಸುವ ಹಕ್ಕು